ಓ.ಎಸ್. ಸಂಖ್ಯೆ: **229/2005**
ಪಿ.ಡಬ್ಲ್ಯೂ. **1**
ಪ್ರಮಾಣೀಕರಿಸಲಾದ ದಿನಾಂಕ : **27-01-2016**

ಪಾಟೀ ಸವಾಲು : ಶ್ರೀ ಎಸ್.ಜಿ.ಕೆ. ವಕೀಲರಿಂದಃ

1ನೇ ವಾದಿ ಆರೋಗ್ಯವಂತರಾಗಿ ಚೆನ್ನಾಗಿರುತ್ತಾರೆ ಎಂದರೆ ಸರಿಯಲ್ಲ. ಕೆಂಪಜ್ಜಿ ಮತ್ತು ಮೂಡ್ಲಗಿರಿಯಪ್ಪ ನನ್ನ ಅಜ್ಜಿ ಮತ್ತು ತಾತ ಆಗಬೇಕು. ದಾವಾ ಆಸ್ತಿಗಳಲ್ಲಿ ಗಂಟಿಗಯ್ಯ ಮತ್ತು ಸಿದ್ದಯ್ಯ ತಲಾ 5 ಎಕರೆ 7 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಆ ಪ್ರಕಾರ ಕಂದಾಯ ದಾಖಲಾತಿಗಳು ಅವರ ಹೆಸರನಲ್ಲಿ ಬಂದಿರುತ್ತವೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದಂತೆ ದಾಖಲೆಗಳನ್ನು ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. 1961-62 ನೇ ಸಾಲಿನಲ್ಲಿ ಸದರಿ ಜಮೀನನ್ನು ಮೇಲೆ ಹೇಳಿದ ಬ್ಯಾಂಕ್‌ಗೆ ಅಡಮಾನ ಮಾಡಿದಾಗ ನನ್ನ ತಂದೆ ಮತ್ತು ಸಿದ್ದಯ್ಯ ಅಪ್ರಾಪ್ತವಯಸ್ಕರಾಗಿದ್ದರು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳಿಗೆ ಆಶ್ರೀಯಾಲ್ ಗ್ರಾಮದಲ್ಲಿ ತಲಾ 2 ಎಕರೆ 20 ಗುಂಟೆ ಜಮೀನು ಮಂಜೂರಾಗಿರುತ್ತದೆ ಎಂದರೆ ಇತ್ತೀಚೆಗೆ ಮಂಜೂರಾಗಿರುತ್ತದೆ. ಗಂಟಿಗಯ್ಯ ಮರಣ ನಂತರ ಅವರ ಹಿಸ್ಸೆಗೆ ಬಂದ ಆಸ್ತಿಗಳು ಅವರ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯ 4 ಜನ ಗಂಡು ಮಕ್ಕಳ ಹೆಸರಿಗೆ ದಿನಾಂಕ 03-04-1993 ರಲ್ಲಿ ದಾವಾ ಆಸ್ತಿಯ ಬಾಬ್ತು ಕಂದಾಯ ದಾಖಲೆಗಳನ್ನು ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದರೆ ನಮಗೆ ಗೊತ್ತಿಲ್ಲದಂತೆ ಮಾಡಿಕೊಂಡಿರುತ್ತಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳನ್ನು ಮೂಲತಃ ಎಲ್ಲರೂ ಸೇರಿ ಅಭಿವೃದ್ಧಿ ಪಡಿಸಿದರು ಎಂದರೆ ಸರಿ.

ನನಗೆ ದಾವಾ ಆಸ್ತಿಗಳಲ್ಲಿ ಬಿ ಷೆಡ್ಯೂಲ್‌ನಲ್ಲಿ 1/4 ರಲ್ಲಿ ಭಾಗಾಶ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ 156/2 ರ ಅಸ್ತಿಯು ಕೆಂಪಜ್ಜಿಯ ತವರು ಮನೆಯಿಂದ ಬಂದಿರುತ್ತದೆ. ಸದರಿ ಆಸ್ತಿಯನ್ನು ಮಾರಿ ಬಂದ ಪ್ರತಿಫಲದಿಂದ ದಾವಾ ಆಸ್ತಿಯನ್ನು ಅಭಿವೃದ್ಧಿ ಪಡಿಸಲಾಗಿದೆ ಎಂದರೆ ಸರಿ. ಗಂಟಿಗಯ್ಯ, ಸಿದ್ದಯ್ಯ ಮತ್ತು ನನ್ನ ತಂದೆಗೆ 1992-93 ರಲ್ಲಿ ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ಮಂಜೂರಾಗಿರುತ್ತವೆ ಎಂದರೆ ಸರಿ. ಸಾಕ್ಷಿ ಸ್ವತಹ ನುಡಿಯುತ್ತಾರೆ ಅದು ಅವರ ಸ್ವಯಾರ್ಜಿತ ಆಸ್ತಿಗಳು. ದಾವಾ ಆಸ್ತಿಗಳಲ್ಲಿ 1ನೇ ಪ್ರತಿವಾದಿಯ ವಾರಸುದಾರರಾಗಿ ಹೊಸದಾಗಿ ಮಂಜೂರಾದ ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ದಾವಾ ಎ ಷೆಡ್ಯೂಲ್ ಅನುಸೂಚಿಯ

ಆಸ್ತಿಯು ಒಟ್ಟು ಕುಟುಂಬದಿಂದ ಬಂದ ಆಸ್ತಿ ಆಗಿರುತ್ತದೆ. ಗಂಟೆಗಯ್ಯ ಮತ್ತು ಸಿದ್ದಯ್ಯ ಯಾವತ್ತೂ ನಮಗೆ ಮೋಸ ಮಾಡಿಲ್ಲ ಅವರನ್ನು ಅನಾವಶ್ಯಕವಾಗಿ ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕನಾಯಕನಹಳ್ಳಿ.